**ರೇಶ್ಮಾ ಭಟ್**

ಕಲೆ: ಪ್ರವೀಣ್ ಆಚಾರ್ಯ

# ಮೂಗಿನಾಳವ ಬಗೆದಾಗ



ಇದೇನು ಸುಲಭವೇ
ಇದರ ಬಗ್ಗೆ ಗುರಿಹಿಡಿದು
ಮಾತಾಡುವುದು?
ಯಾಕೆ ನನ್ನ ವಿಷಯವಾಗಿ
ಮೂಗು ತೂರಿಸಿದಿರಿ ಎಂದರೆ
ಏನು ಹೇಳುವುದು?

ಈ ಬಗ್ಗೆ ಸಾಕಷ್ಟು ಹೇಳಿಯಾಗಿದೆ ಮತ್ತೆ ನಿಂದೇನು?

ನಂದೇನಿಲ್ಲ... ನನಗೂ ಒಂದು ಮೂಗಿರುವುದರಿಂದ ನನ್ನದೂ ಒಂದಿರಲಿ ಅಂತ...

ಆದರೆ ಅಷ್ಟೇ ಅಲ್ಲ, ಈ ವಾಸನಾಮಯ ಪ್ರಪಂಚದಲಿ ಮುಂಚಾಚಿರುವ ಇದರೊಂದಿಗೆ ಬದುಕುತ್ತಿರುವ ನನ್ನಂಥ ಎಷ್ಟೋ ಜೀವಿಗಳಿಗೆ ಈ ಬರಹವನ್ನು ಅರ್ಪಿಸಿ ಧನ್ಯಳಾಗಬೇಕು ಅಂತಲೂ... ಕಣ್ಣಿನಂತೆ ಆಟೊ ಕ್ಲೋಸಿಂಗ್ ಸಿಸ್ಟಮ್ ಇಲ್ಲದ ಇದರೊಂದಿಗೆ ಬದುಕುವುದೇನು ಸುಲಭವೇ? ಬೆರಳುಗಳ ಸಹಾಯ ಪಡೆದು ಕ್ಲೋಸ್ ಮಾಡಬಹುದಲ್ಲ ಎಂದರೆ ಅದೂ ಸುಲಭವಲ್ಲ. ಪೂರ್ತಿ ಕ್ಲೋಸ್ ಮಾಡಿದೆವೋ ನಾವೇ ಕ್ಲೋಸ್ ಆಗುವ ಸಾಧ್ಯತೆಗಳಿರುವುದರಿಂದ ಇವೆಲ್ಲ ಹುಡುಗಾಟಿಕೆಯ ವಿಷಯಗಳಲ್ಲ. ಕಿಟಕಿ ಬಾಗಿಲುಗಳನ್ನು ಮುಚ್ಚಿದಾಗ, ಗಾಳಿಗಾಗಿ ಇರಲಿ ಎಂದು ಗೋಡೆಯಲ್ಲಿ ಸಣ್ಣ ಜಾಲಂಧ್ರ ಇಡುವಂತೆ ಬೆರಳುಗಳನ್ನು ಗಟ್ಟಿಯಾಗಿ ಒತ್ತದೆ ಮುಚ್ಚಿಕೊಳ್ಳುವುದಷ್ಟೇ ನಮಗಿರುವ ಒಂದೇ ಒಂದು ಆಯ್ಕೆ.

'ಹಿರಿದು ಸೊಗಸಾಯ್ತೆನಗೆ ಪೂರ್ವದ ಪರಿಮಳದ ಕೇಳಿಯಲಿ'

ಅಂದು ದ್ವಾಪರದಲ್ಲಿ ದ್ರೌಪದಿಯ ಮೂಗಿಗೆ ಪೂರ್ವ ದಿಕ್ಕಿನಿಂದ ಸೌಗಂಧಿಕದ ಪರಿಮಳ ಬಂದು ಅಡರಿತ್ತು. ಇಂದು ಈ ಕಲಿಯುಗದಲ್ಲಿ ನಮ್ಮಂಥವರ ಮೂಗಿಗೆ ನಿತ್ಯ ಒದಗುವುದೇ ಇದು. ನಮ್ಮ ಮನೆಯ ಪೂರ್ವ ದಿಕ್ಕಿನಲ್ಲಿ ಮರಿ ವೃಷಭಾವತಿಯಂತೆ ಹರಿಯುವ ಈ ಸಣ್ಣ ತೊರೆ ತುಂಬು ನೀರಿನ ಭಾಗ್ಯ ಸಂಪನ್ನೆಯಷ್ಟೇ ಅಲ್ಲ ಸದಾರವೆ, ಕಲರವೆ, ಕಲಹರವೆಯಾಗಿಯೂ ಇರುವವಳು. ಅಪಾರ್ಟ್‌ಮೆಂಟಿನ ನೀರು ಯಾಕೆ ಈ ತೋಡಿಗೆ ಬಿಡುತ್ತೀರಾ? ಇದೇನು ನಿಮ್ಮ